ಅಧ್ಯಕ್ಷರು : ಆಯಿತು. ಮುಂದಿನ ಪ್ರಶ್ನೆ ಮಾನ್ಯ ರಾಜುಗೌಡರು.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, 385 (3421) ಪ್ರಶ್ನೆಯನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ವರ್ಗಾಯಿಸಲಾಗಿದೆ.

ದ.ಕನ್ನಡ ಜಿಲ್ಲೆಯಲ್ಲಿರುವ ರೋಗಗ್ರಸ್ತ ಸಣ್ಣ ಕೈಗಾರಿಕೆಗಳು

386 (3459) ಶ್ರೀ ಗೋಪಾಲ ಬಂಡಾರಿ. ಹೆಚ್ (ಕಾರ್ಕಳ): ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆ ಮತ್ತು ದ.ಕ. ಜಿಲ್ಲೆಯಲ್ಲಿರುವ ರೋಗಗ್ರಸ್ತ ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ಒದಗಿಸುವುದು).

ಆ) ಉಡುಪಿ ಮತ್ತು ದ.ಕ. ಜಿಲ್ಲೆಯಲ್ಲಿ ಇರುವ ಕೈಗಾರಿಕಾ ಶೆಡ್ಡ್‌ಗಳ ಸಂಖ್ಯೆ ಎಷ್ಟು; ಮತ್ತು ಎಷ್ಟು ವಿತರಣೆ ಆಗಿವೆ; ಎಷ್ಟು ಬಾಕಿ ಇದೆ ವಿತರಣೆ ಆದ ಶೆಡ್ಡುಗಳ ಪೈಕಿ ಎಷ್ಟರಲ್ಲಿ ಕೈಗಾರಿಕೆ ಪ್ರಾರಂಭವಾಗಿದೆ? (ತಾಲ್ಲೂಕುವಾರು ವಿವರ ಒದಗಿಸುವುದು)

ಶ್ರೀ ಎಸ್. ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :

ಅ) 81 ರೋಗಗ್ರಸ್ತ ಸಣ್ಣ ಕೈಗಾರಿಕೆಗಳು.
ತಾಲ್ಲೂಕುವಾರು ವಿವರ ಕೆಳಗಿನಂತಿದೆ:-

ಕ್ರ ಸಂ.	ತಾಲ್ಲೂಕಿನ ಹೆಸರು	ರೋಗಗ್ರಸ್ತ ಕೈಗಾರಿಕೆಗಳ ಸಂಖ್ಯೆ
1	2	3
ದಕ್ಷಿಣ ಕನ್ನಡ ಜಿಲ್ಲೆ		
1)	ಮಂಗಳೂರು	41
2)	ಪುತ್ತೂರು	18
3)	ಬೆಳ್ತಂಗಡಿ	2
4)	ಸುಳ್ಯ	8
5)	ಬಂಟ್ವಾಳ	-
ಉಡುಪಿ ಜಿಲ್ಲೆ		
6)	ಉಡುಪಿ	8
7)	ಕುಂದಾಪುರ	9
8)	ಕಾರ್ಕಳ	1
	ಒಟ್ಟು	**81**

ಆ) ಉಡುಪಿ ಮತ್ತು ದ.ಕ. ಜಿಲ್ಲೆಯಲ್ಲಿರುವ ಎಂಟು ಕೈಗಾರಿಕಾ ವಸಾಹತುಗಳಲ್ಲಿ 352 ಮಳಿಗೆಗಳನ್ನುನಿರ್ಮಿಸಲಾಗಿದೆ. ಅದರಲ್ಲಿ 325 ಮಳಿಗೆಗಳನ್ನು ಹಂಚಿಕೆ ಮಾಡಲಾಗಿದೆ. 263 ಮಳಿಗೆಗಳು ಕಾರ್ಯ ನಿರ್ವಹಿಸುತ್ತಿವೆ.

	ತಾಲ್ಲೂಕು		ಮಳಿಗೆ ವಿವರ	
	ನಿರ್ಮಾಣ	ಹಂಚಿಕೆ	ಖಾಲಿ	ಕಾರ್ಯ ನಿರ್ವಹಿಸುತ್ತಿರುವ ಮಳಿಗೆಗಳು
ಮಂಗಳೂರು	264	252	12	209
ಬೆಳ್ತಂಗಡಿ	10	4	6	-
ಉಡುಪಿ	56	49	7	43
ಕುಂದಾಪುರ	12	10	2	5
ಕಾರ್ಕಳ	10	10	-	6
	352	**325**	**27**	**263**

ಶ್ರೀ. ಯು. ಆರ್. ಸಭಾಪತಿ : (ಶ್ರೀ ಗೋಪಾಲ ಭಂಡಾರಿ ಅವರ ಪರವಾಗಿ) ಮಾನ್ಯ ಅಧ್ಯಕ್ಷರೆ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೋಗಗ್ರಸ್ತ ಸಣ್ಣ ಕೈಗಾರಿಕೆಗಳು ಎಷ್ಟು ಎಂದು ಕೇಳಿದ್ದಕ್ಕೆ ಆ ಪ್ರಕಾರ ಒಟ್ಟಿಗೆ 81 ಸಣ್ಣ ಕೈಗಾರಿಕೆಗಳು ರೋಗಗ್ರಸ್ತಗಳಾಗಿವೆ ಎಂದು ತಿಳಿಸಿದ್ದಾರೆ. ನಾನು ಮಾನ್ಯ ಸಚಿವರಲ್ಲಿ ಕೇಳುವುದೇನೆಂದರೆ, ಈ ರೋಗಗ್ರಸ್ತ ಸಣ್ಣ ಕೈಗಾರಿಕೆಗಳು 81 ಸಣ್ಣ ಕೈಗಾರಿಕೆಗಳು ಆಗಿರುವ ಬಗ್ಗೆ ಅವುಗಳನ್ನು ಇನ್ನಷ್ಟು ಒಳ್ಳೆಯ ರೀತಿಯಲ್ಲಿ ಮುಂದೆ ತರಲಿಕ್ಕೆ ಯಾವುದಾದರೂ ಕ್ರಮ ಹಾಕಿಕೊಂಡಿದ್ದೀರಾ? ಇನ್ನು ನಮ್ಮ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಳಿಗೆಗಳು 352ರಲ್ಲಿ 263 ಎಂದು ತಿಳಿಸಿದ್ದೀರಿ. ಇನ್ನು ಕಾರ್ಯ ನಿರ್ವಹಿಸದೆ ಉಳಿದಿರತಕ್ಕ ಮಳಿಗೆಗಳ ಬಗ್ಗೆ ನಿಮ್ಮ ಇಲಾಖೆಯು ತೆಗೆದುಕೊಂಡ ಕ್ರಮವೇನು?

ಶ್ರೀ ಎಸ್. ಆರ್. ಕಾಶಪ್ಪನವರ್ : ಮಾನ್ಯ ಅಧ್ಯಕ್ಷರೆ, ರೋಗಗ್ರಸ್ತ ಕೈಗಾರಿಕೆಗಳನ್ನು ಪುನಶ್ಚೇತಗೊಳಿಸಲಿಕ್ಕೆ ಟಾಸ್ಕ್‌ಫೋರ್ಸ್ ಸಮಿತಿಯನ್ನು ಜಾಯಿಂಟ್ ಡೈರೆಕ್ಟರ್‌ರವರ ಅಧ್ಯಕ್ಷತೆಯಲ್ಲಿ ನೇಮಿಸಲಾಗಿದೆ. ಮತ್ತು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾಮಟ್ಟದ ಅಧಿಕಾರಿಗಳ ಸಮಿತಿಯನ್ನು ಕೂಡ ರಚಿಸಲಾಗಿದೆ. ಉಳಿದ ಮಳಿಗೆಗಳನ್ನು ಹಂಚುವುದಕ್ಕೆ ಅದರ ಬಗ್ಗೆ ಸೂಕ್ತ ಕ್ರಮವನ್ನು ಆದಷ್ಟು ಬೇಗ ತೆಗೆದುಕೊಳ್ಳಲಾಗುವುದು.

ಶ್ರೀ ಯು. ಆರ್. ಸಭಾಪತಿ: ಯಾವರೀತಿಯ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಿ ಎಂದು ದಯವಿಟ್ಟು ವಿವರಿಸುತ್ತೀರಾ?

ಶ್ರೀ ಎಸ್. ಆರ್. ಕಾಶಪ್ಪನವರ್ : ರೋಗಗ್ರಸ್ತ ಘಟಕಗಳನ್ನು ಗುರುತಿಸುವ ಕಾರ್ಯಕ್ರಮ ಮೊಟ್ಟಮೊದಲು ಅದು ಆಗಬೇಕಾಗಿದೆ. ರೋಗಗ್ರಸ್ತ ಕೈಗಾರಿಕೆಗಳನ್ನು ಗುರುತಿಸುವಂತಹ ಪ್ರಥಮ ಹಂತಕದ ಕಾರ್ಯಕ್ರಮ ನಡೆಯುತ್ತಿದೆ. ಅದು ಮುಗಿದ ತಕ್ಷಣ ಮುಂದಿನ ಕ್ರಮಗಳನ್ನು ನಾವು ಕೈಗೊಳ್ಳುತ್ತೇವೆ.

ಶ್ರೀ ಯು. ಆರ್. ಸಭಾಪತಿ : ನಿರ್ವಹಣೆಯಾಗದಿರತಕ್ಕ 352 ಮಳಿಗೆಗಳಲ್ಲಿ 263 ಕಾರ್ಯನಿರ್ವಹಿಸುತ್ತಿವೆಯೆಂದು ತಿಳಿಸಿದ್ದೀರಿ. ಸುಮಾರು 90 ಮಳಿಗೆಗಳು ಕಾರ್ಯನಿರ್ವಹಿಸುತ್ತಿಲ್ಲ. ಇದರ ಬಗ್ಗೆ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ? ಅವುಗಳನ್ನು ವಶಪಡಿಸಿಕೊಳ್ಳಲಿಕ್ಕೆ ಏನಾದರೂ ಕ್ರಮವನ್ನು ತೆಗೆದುಕೊಂಡಿದ್ದೀರಾ?

ಶ್ರೀ ಎಸ್. ಆರ್. ಕಾಶಪ್ಪನವರ್ : ಯಾವ ಯಾವ ಕೆಲಸವನ್ನು ಪ್ರಾರಂಭ ಮಾಡಿಲ್ಲವೋ ಅವರಿಗೆ ಕಾನೂನಿನ ಪ್ರಕಾರ ನೋಟೀಸ್ ಕೊಟ್ಟು ಮುಂದಿನ ಕ್ರಮಗಳನ್ನು ಅವರ ಮೇಲೆ ಜರುಗಿಸಲಾಗುವುದು.

<u>ತಡೆ ಹಿಡಿಯಲಾದ ಪ್ರಶ್ನೆಗಳು</u>

ಗಂಗಾ ಕಲ್ಯಾಣ ಯೋಜನೆಗಳನ್ನು ಸಮಾಜ ಕಲ್ಯಾಣ ಇಲಾಖೆಗೆ ವರ್ಗಾವಣೆ

56 (171) ಶ್ರೀ ಶಿವರಾಮು. ಬಿ (ಗಂಡಸಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಿದ್ದ ಗಂಗಾ ಕಲ್ಯಾಣ ಯೋಜನೆಗಳನ್ನು ಸಮಾಜ ಕಲ್ಯಾಣ ಇಲಾಖೆಗೆ ವರ್ಗಾವಣೆ ಮಾಡಿರುವುದು ನಿಜವೆ;

ಆ) ವರ್ಗಾವಣೆ ಮಾಡಿರುವುದರಿಂದ ದುರಸ್ಥಿ ಅವುಗಳ ಪುನಶ್ಚೇತನ ಮತ್ತು ಅಪೂರ್ಣಗೊಂಡ ಯೋಜನೆಗಳನ್ನು ಪೂರ್ಣಗೊಳಿಸಲು ತೆಗೆದುಕೊಂಡಿರುವ ಕ್ರಮವೇನು?

ಇ) ಹಾಸನ ಜಿಲ್ಲೆಯಲ್ಲಿ ಮೇಲಿನ ವಿಚಾರದಲ್ಲಿ ಕೈಗೊಂಡಿರುವ ಯೋಜನೆಗಳೆಷ್ಟು? ವರ್ಗಾವಣೆ ಮಾಡಿರುವ ಯೋಜನೆಗಳೆಷ್ಟು? ದುರಸ್ಥಿಗೆ ಹಾಕಿಕೊಂಡಿರುವ ಕ್ರಮವೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ಕೇಂದ್ರ ಪುರಸ್ಕೃತ ಗಂಗಾ ಕಲ್ಯಾಣ ಯೋಜನೆಯನ್ನು ಮಾತ್ರ ವರ್ಗಾಯಿಸಲಾಗಿದೆ. ಆದರೆ ಸಣ್ಣ ನೀರಾವರಿ ಇಲಾಖೆಯ ಮೂಲಕ ಜಿಲ್ಲಾ ಪಂಚಾಯತ್‌ಗಳು ಅನುಷ್ಠಾನಗೊಳಿಸಿದ ಯೋಜನೆಗಳನ್ನು ವರ್ಗಾಯಿಸಿರುವುದಿಲ್ಲ.

ಆ) ವರ್ಗಾವಣೆಯಾಗಿರುವ ಯೋಜನೆಗಳ ಪೈಕಿ ಅಗತ್ಯವಿರುವ ಘಟಕಗಳಿಗೆ ದುರಸ್ತಿ ಪುನಶ್ಚೇತನ ಮತ್ತು ಅಪೂರ್ಣಗೊಂಡ ಯೋಜನೆಗಳನ್ನು ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು.